
# ಹುಡುಕುವಾಟ



ಹುಗಿದ ಮಮತಾಜಳ ಉಳಿದ ಕನವರಿಕೆಗಳ
ಹುಡುಕುತ್ತದೆ ಗಾಳಿ ಸಂಗಮವರಿ ಬಿರುಕಲಿ
ತಬ್ಬಿಕೊಂಡು ಫೋಟೊ
ತೆಗೆಸಿಕೊಂಡ ಜೋಡಿ
ಎಡವಿದಂತೆ ನಿಲ್ಲುತ್ತಾರೊಮ್ಮೆ
ಮಿನಾರಿಗೊರಗಿ

ಹೆಚ್ಚಿದ ಕರಬೂಜಗಳ ತಿನ್ನಲೇಬೆಕೆಂದು
ಒತ್ತಾಯಿಸುತ್ತಾನೆ ಸಣ್ಣ ಹುಡುಗ
ದೊಡ್ಡ ದನಿಯಲ್ಲಿ.
ಎಡಗೈಲಿ ಒಡಿಸಿದ
ನೊಣ ಹಾರುತ್ತದೆ
ಬುಟ್ಟಿ ತುಂಬಿದ ಸಿಪ್ಪೆಗೆರಗಿ

ಕಾಣುವ ಕಣ್ಣ
ಮುಚ್ಚಿಕೊಂಡು ಸುಮ್ಮನೆ
ಮೇಲೊಂದು ಬಟ್ಟೆ ಬಿಗಿದು ಕಟ್ಟಿ
ಒತ್ತಾಯದ ಕತ್ತಲೆಗೆ ಕೈಯಾಡಿಸುತ್ತ
ತಡವರಿಸಿ ಹುಡುಕಬೇಕು
ಬೇಕೆಂತಲೆ ಕಾಣೆಯಾದವರ
ಮತ್ತು ಇದ್ದೂ ಇರದವರ

ಕಾಯಬೇಕು ಮೈಯೆಲ್ಲಾ
ಕಿವಿಯಾಗಿಸಿ ಇರುವಿಕೆಯ ಸಣ್ಣ ಸಪ್ಪಳಕೆ
ಮುಗ್ಗರಿಸದೆ ಮುನ್ನುಗ್ಗಬೇಕು
ಸದ್ದಿನ ಜಾಡು
ಬಿಡದಂತೆ ಕಾಲಿಡಬೇಕು
ಇಟ್ಟಿದ್ದು ಗೊತ್ತಾಗದಂತೆ
ಕಾಲಡಿಯ ನೆಲಕ್ಕೆ

ಖುದ್ದು ಕಟ್ಟಿಕೊಂಡ
ಕಣ್ಣಪಟ್ಟಿ ಬಿಚ್ಚದೆ
ಇದ್ದವರ ಅಡಗಿಸಿಟ್ಟು
ಹುಡುಕುತ್ತ ಸಿಗದೆ
ಒದ್ದಾಡುವುದ ಆಡಬೇಕು
ಕುಶಾಲಿಗಾಗಿ

ವಿದೇಶದ ಮಗನ ಫೋನಿಗೆ ಕಾಯುತ್ತ
ಕೂತಲ್ಲೇ ನಿದ್ದೆ ಹೋದ ಅಜ್ಜ
ತತ್ತರಿಸುವ ಹೆಜ್ಜೆಯಿಡುತ್ತ ಕಪಾಟು
ತೆಗೆದು ಹುಡುಕುತ್ತಾನೆ ಮೂಲೆ ತಡಕಿ
ಬಣ್ಣ ಮಾಸಿದ ಪುಟಾಣಿ ಕುಲಾವಿಗಾಗಿ
ದೊಡ್ಡಕೆ ನೆಗೆಯಾಡುತ್ತಿದೆ
ರಜತ ಮಹೋತ್ಸವದ ಜೋಡಿ
ಉಡುಗೊರೆ ಕೊಡಲು ಸಾಲು
ನಿಂತವರ ನೋಟ
ಒಡುತ್ತಿದೆ
ಬಫೆಯ ತಾಟಲ್ಲಿನ
ಐಸ್‌ಕ್ರೀಮಿನ ಖಾತ್ರಿಗಾಗಿ

• ಪ್ರಜ್ಞಾ ಮತ್ತಿಹಳ್ಳಿ